ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಈ ಕಾಲೇಜು ಸ್ಯಾಂಕ್ಷನ್ ಆಗಿದ್ದು ಮೊನ್ನೆ. ೧೯೮೯-೯೦ನೇ ಸಾಲಿಗೆ ಪ್ರಥಮ ದರ್ಜೆ ಕಾಲೇಜು ಪ್ರಾರಂಭ ಆಗಿದೆ. ಅಲ್ಲಿ ಸರ್ಕಾರದ ಜಾಗ ಇಲ್ಲ. ಅಕ್ವೈರ್ ಮಾಡಬೇಕು ಎಂಬ ವಿಚಾರ ಇರುವುದರಿಂದ ಸ್ವಲ್ಪ ಅಕ್ವಿಸಿಷನ್ ಎಲ್ಲ ಆಗಬೇಕಾದರೆ ತಡ ಆಗುತ್ತೆದೆ.

ತುಮಕೂರಿನಲ್ಲಿ ಮೀನು ಮಾರುಕಟ್ಟೆ

೩೪೯. ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು).—ಮಾನ್ಯ ಬಂದರು ಹಾಗೂ ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಿಸುವ ಪ್ರಸ್ತಾಪವಿದೆಯೇ ;

ಆ) ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರುಗಳು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು)—

ಅ) ಹೌದು. ತುಮಕೂರಿನ ನಗರಸಭಾ ಪರಿಷತ್ ವತಿಯಿಂದ ಅಲ್ಲಿನ ಸಂತೆ ಮೈದಾನದಲ್ಲಿ ಮೀನು ಮಾರುಕಟ್ಟೆ ಕಟ್ಟುವ ಪ್ರಸ್ತಾಪವಿರುತ್ತದೆ.

ಆ) ತುಮಕೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಮೀನುಗಾರಿಕೆ ಇಲಾಖೆ ವತಿಯಿಂದ ಸಾಲ ಮತ್ತು ಸಹಾಯಧನ ಯೋಜನೆಯಲ್ಲಿ ಒಟ್ಟು ರೂ. ೪೯,೮೦೦-೦೦ ಗಳನ್ನು ಮಂಜೂರು ಮಾಡಿ ಅದರಲ್ಲಿ ಮೊದಲನೇ ಕಂತು ರೂ. ೧೨,೪೫೦-೦೦ಗಳನ್ನು ಬಿಡುಗಡೆ ಮಾಡಲಾಗಿದೆ. ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದಿಲ್ಲ

ಶ್ರೀ ಎಸ್. ಷಫಿ ಅಹಮ್ಮದ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೪೯,೮೦೦-೦೦ ರೂಪಾಯಿಗಳನ್ನು ಈ ಮಾರ್ಕೆಟ್‌ಗೋಸ್ಕರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ಈ ಹಣವನ್ನು ಯಾವಾಗ ಕೊಟ್ಟಿದ್ದೀರಿ, ಯಾವರೀತಿ ಡಿಲೇ ಆಗಿದೆ, ಮತ್ತೆ ಸೈಟ್ ಸೆಲಾ ಅಲಾಟ್ ಮಾಡಿದ್ದೀರಾ ಎಂದು ಹೇಳಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಉಪಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಉತ್ತರ ಹೇಳಬೇಕೆಂದರೆ ೧೯೮೫-೮೬ನೇ ಸಾಲಿನಲ್ಲಿ ಅಲ್ಲಿ ಇಂತಹ ಒಂದು ಮೀನು ಮಾರುಕಟ್ಟೆಯ ವ್ಯವಸ್ಥೆಗಾಗಿ ನಮ್ಮ ಮೀನುಗಾರಿಕಾ ಇಲಾಖೆ ಅಲ್ಲಿನ ಪುರಸಭೆಯವರಿಗೆ ಲೀಸ್ ಕಂ ಸಬ್ಸಿಡಿ ಆಧಾರದ ಮೇಲೆ ಸುಮಾರು ೪೮ ಸಾವಿರ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿ ಈಗಾಗಲೇ ೧೨,೪೫೦-೦೦ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಆದರೆ ಯಾವ ಸ್ಥಳದಲ್ಲಿ ಮೀನು ಮಾರುಕಟ್ಟೆಯನ್ನು ಕಟ್ಟಬೇಕು ಎಂದು ಹೊರಟಾಗ, ಅಲ್ಲಿ ಸಾರ್ವಜನಿಕರಿಂದ ತೀವ್ರ ಪ್ರತಿಭಟನೆ ಬಂದಿದ್ದರಿಂದ ಆ ಕೆಲಸ ಸ್ಥಗಿತಗೊಂಡಿದೆ, ನಂತರ ಅದು ಮುಂದುವರಿದಿಲ್ಲ. ಬಹುಶಃ ಇದು ಸರಿಯಾದುದಲ್ಲ ಎಂದು ನನಗೂ ಕೂಡ ಮನವರಿಕೆಯಾಗಿದೆ. ಮಾನ್ಯ ಸದಸ್ಯರೊಡನೆ ನಾನು ಸಮಾಲೋಚನೆ ಮಾಡಿ ಆ ಮೀನು ಮಾರುಕಟ್ಟೆಯನ್ನು ಕಟ್ಟಬೇಕು ಎಂದು ಏನು ಇದೆಯೋ ಅದನ್ನು ಸಾರ್ವಜನಿಕರ ಇಚ್ಛೆಗೆ ತಕ್ಕಂತೆ ಸರಿಯಾದ ಸ್ಥಳದಲ್ಲಿ ಕಟ್ಟಿ ಆ ಮೀನು ಮಾರುಕಟ್ಟೆಯಿಂದ ಜನಗಳಿಗೆ ಸುಲಭವಾಗಿ ಮೀನು ಸಿಕ್ಕುವ ರೀತಿಯಲ್ಲಿ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್

೩೫೦. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್‌ನ್ನು ಕರ್ನಾಟಕ ಸಹಕಾರಿ ಎಣ್ಣೆ ಬೀಜಗಳ ಮಹಾ ಮಂಡಳಿಗೆ ವಹಿಸಿಕೊಡಲಾಗಿದೆಯೇ ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ;